**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿರವರ ನ್ಯಾಯಾಲಯ, ಅರಕಲಗೂಡು**

**ಸಿ.ಸಿ.ನಂಃ653/2019**

ಫಿರ್ಯಾದಿ :- ಆರಕ್ಷಕ ಉಪ-ನಿರೀಕ್ಷಕರು,
ಅರಕಲಗೂಡು ಪೊಲೀಸ್ ಠಾಣೆ,
ಅರಕಲಗೂಡು.

ವಿರುದ್ಧ

ಆರೋಪಿತರು :- ಶಿವರಾಜ ಬಿನ್ ರಾಜಯ್ಯ ಮತ್ತು ಇತರರು

**:: ದೋಷಾರೋಪಣೆ ::**

ಶ್ರೀ.ಯೋಗೇಶ್, ಎಂ.ಎ. ಎಲ್.ಎಲ್.ಬಿ., ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಕಲಗೂಡು ಆದ ನಾನು,

1. ಶಿವರಾಜ ಬಿನ್ ರಾಜಯ್ಯ , 35 ವರ್ಷ,
2. ರಾಜಯ್ಯ ಬಿನ್ ಕಾಳಯ್ಯ , 68 ವರ್ಷ,
3. ತಾಯಮ್ಮ ಕೋಂ ರಾಜಯ್ಯ , 60 ವರ್ಷ,

1 ರಿಂದ 3 ನೇ ಆರೋಪಿತರ ವಾಸ ಯಗಟಿ ಗ್ರಾಮ,
ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ಟೌನ್ ,
ಹಾಸನ ಜಿಲ್ಲೆ.

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿಃ15/04/2019 ರಂದು ರಾತ್ರಿ 09:00 ಗಂಟೆ ಸಮಯದಲ್ಲಿ ಅರಕಲಗೂಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಯಗಟ್ಟಿ ಗ್ರಾಮದಲ್ಲಿ ಚಾಸಾ 1 ಮಂಗಳಾರವರು ಮನೆಯೊಳಗೆ ಇರುವಾಗ ಜಮೀನು ವಿಚಾರದಲ್ಲಿ ಸಾಕ್ಷಿ 1 ರವರ ಮೇಲೆ ದ್ವೇಷವಿಟ್ಟುಕೊಂಡು 1 ರಿಂದ 3 ನೇ ಆರೋಪಿತರಾದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಕೈಯಲ್ಲಿ ಕಲ್ಲು, ಇಟ್ಟಿಗೆ ಹಿಡಿದುಕೊಂಡು ಸಾಕ್ಷಿ 1 ರವರ ಮನೆಯ ಬಳಿಗೆ ಹೋಗಿ ಕಲ್ಲು ಮತ್ತು ಇಟ್ಟಿಗೆಯಿಂದ ಸಾಕ್ಷಿ 1 ರವರ ಮನೆಯ ಮೇಲೆ ಹೊಡೆದು ಸುಮಾರು 10 ಮಂಗಳೂರು ಹೆಂಚುಗಳನ್ನು ಒಡೆದುಹಾಕಿದ್ದು ಮತ್ತು ಬಾಗಿಲು ಜಖಂ ಗೊಳಿಸಿ ಸುಮಾರು ರೂಪಾಯಿ 180-00 ರಿಂದ 200-00 ಗಳನ್ನು

ನಷ್ಟಪಡಿಸಿದ್ದು, ನೀವು ಭಾ.ದಂ.ಸಂ.ಕಲಂ:427 ಸಹವಾಚಕ ಕಲಂ:34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು 1 ರಿಂದ 3 ನೇ ಆರೋಪಿತರಾದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಸಾಕ್ಷಿ 1 ಮತ್ತು 2 ರವರಿಗೆ 3 ನೇ ಆರೋಪಿಯಾದ ನೀವು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ ಭಾ.ದಂ.ಸಂ.ಕಲಂ:504 ಸಹವಾಚಕ ಕಲಂ:34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು 1 ರಿಂದ 3 ನೇ ಆರೋಪಿತರಾದ ನೀವುಗಳು ಅಪರಾಧ ಮಾಡುವ ಏಕೋದ್ದೇಶದಿಂದ ಸಾಕ್ಷಿ 1 ರವರು ಮನೆಯ ಬಾಗಿಲು ಹಾಕಿದಾಗ 1 ನೇ ಆರೋಪಿಯಾದ ನೀವು ಕಾಲಿನಿಂದ ಮನೆಯ ಬಾಗಿಲು ಒದ್ದು ಜಖಂ ಮಾಡಿದ್ದಾಗ 1 ರಿಂದ 3 ನೇ ಆರೋಪಿತರಾದ ನೀವು ಸಾಕ್ಷಿ 1 ರವರ ಮನೆಯೊಳಗೆ ಅಕ್ರಮ ಪ್ರವೇಶ ಮಾಡಿರುತ್ತೀರಿ ಆದ್ದರಿಂದ ನೀವು ಭಾ.ದಂ.ಸಂ.ಕಲಂ:448 ಸಹವಾಚಕ ಕಲಂ:34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು 1 ಮತ್ತು 3 ನೇ ಆರೋಪಿತರಾದ ನೀವು ಅಪರಾಧವೆಸಗುವ ಏಕೋದ್ದೇಶದಿಂದ ಸಾಕ್ಷಿ-1 ರವರ ರವರ ತಲೆ ಕೂದಲು ಹಿಡಿದು ಮನೆಯ ಹೊರಗೆ ಎಳೆದುಕೊಂಡು ಬಂದು ಅವರ ಮಾನಕ್ಕೆ ಕುಂದುಂಟು ಮಾಡಿರುತ್ತೀರಿ ಆದ್ದರಿಂದ ಭಾ.ದಂ.ಸಂ.ಕಲಂ:354 ಸಹವಾಚಕ ಕಲಂ:34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು 1 ನೇ ಆರೋಪಿತರಾದ ನೀವು ಅಪರಾಧವೆಸಗುವ ಏಕೋದ್ದೇಶದಿಂದ ಸಾಕ್ಷಿ-1 ರವರಿಗೆ ದೊಣ್ಣೆಯನ್ನು ಬೀಸಿ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ನೀವು ಭಾ.ದಂ.ಸಂ.ಕಲಂಃ324 ಸಹವಾಚಕ ಕಲಂಃ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಆರನೆಯದಾಗಿ ಮೇಲೆ ಹೇಳಿದ ದಿನ, ಸಮಯ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಅಪರಾಧವೆಸಗುವ ಏಕೋದ್ದೇಶದಿಂದ ಸಾಕ್ಷಿ 2 ರವರಿಗೆ 1 ನೇ ಆರೋಪಿರವರು ಹಲ್ಲಿನಿಂದ ಬಲಕೈ ಮಧ್ಯದ ಬೆರಳಿಗೆ ಕಚ್ಚಿ ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, 2 ನೇ ಆರೋಪಿಯಾದ ನೀವು ಸಾಕ್ಷಿ 2 ರವರ ಬಲಎದೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ನೀವು ಭಾ.ದಂ.ಸಂ.ಕಲಂಃ323 ಸಹವಾಚಕ ಕಲಂಃ34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನನ್ನ ಸಮಕ್ಷಮದಲ್ಲಿ ಪಡೆದುಕೊಳ್ಳಲಾಯಿತು.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,<br>
ಅರಕಲಗೂಡು